ಕರ್ನಾಟಕ ಸರ್ಕಾರ

ವಿತ್ತೀಯ ಕಾರ್ಯನೀತಿ ಸಂಸ್ಥೆ

ಸಂಖ್ಯೆ: Computer No. 851178

ದಿನಾಂಕ: 13.09.2022

ರವರಿಗೆ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಇಂಧನ ಇಲಾಖೆ, ಕೊಠಡಿ ಸಂ.236
2ನೇ ಮಹಡಿ, ವಿಕಾಸಸೌಧ,
ಬೆಂಗಳೂರು- 560 001.

ಮಾನ್ಯರೆ,

**ವಿಷಯ**: ವಿತ್ತೀಯ ಕಾರ್ಯನೀತಿ ಸಂಸ್ಥೆಯ ಗ್ರಂಥಾಲಯವನ್ನು ಪರಾಮರ್ಶನದ (Reference only) ಉದ್ದೇಶಕ್ಕಾಗಿ ಉಪಯೋಗಿಸುವ ಕುರಿತು.

ವಿತ್ತೀಯ ಕಾರ್ಯನೀತಿ ಸಂಸ್ಥೆಯು ಆರ್ಥಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದ ಆರ್ಥಿಕ ಮತ್ತು ಇತರೆ ಇಲಾಖೆಗಳ ಅಧಿಕಾರಿಗಳಿಗೆ ತೆರಿಗೆ (ಜಿ.ಎಸ್.ಟಿ ಮತ್ತು ಅಬಕಾರಿ) ಸಾಲ ಮತ್ತು ಹೊಣೆಗಾರಿಕೆ ನಿರ್ವಹಣೆ, ವಿತ್ತೀಯ ವಿಕೇಂದ್ರಿಕರಣ, ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಹಾಗೂ ಯೋಜನಾ ನಿರ್ವಹಣೆ ವಿಷಯಗಳ ಬಗ್ಗೆ ತರಬೇತಿಯನ್ನು ನೀಡುತ್ತಿದ್ದು, ವಿತ್ತೀಯ ಕಾರ್ಯನೀತಿ ವಿಷಯಗಳಲ್ಲಿ ಸಂಶೋಧನೆಯನ್ನು ನಡೆಸುತ್ತಿರುವ ಸಂಸ್ಥೆಯಾಗಿದೆ.

ವಿತ್ತೀಯ ಕಾರ್ಯನೀತಿ ಸಂಸ್ಥೆಯ ಸುಸಜ್ಜಿತ ಗ್ರಂಥಾಲಯವು ಓದುಗರ ಜ್ಞಾನವನ್ನು ವೃದ್ಧಿಸಲು ವಿಶಾಲ ಶ್ರೇಣಿಯ ಶೈಕ್ಷಣಿಕ ಸಂಪನ್ಮೂಲಗಳಾದ ಪುಸ್ತಕಗಳು, ನಿಯತಕಾಲಿಕೆಗಳು, ಆನ್ಲೈನ್ ನಿಯತಕಾಲಿಕೆಗಳು, ದತ್ತಾಂಶ ಸಂಚಯಗಳು, ಹಳೆಯ ಸಂಪುಟಗಳು, ವರದಿಗಳು, ಮತ್ತು ಶೈಕ್ಷಣಿಕ ಆಡಿಯೋ/ವಿಡಿಯೋ ಸಿ.ಡಿಗಳನ್ನು ಹೊಂದಿದ್ದು, ತನ್ನ ಓದುಗರ ಮಾಹಿತಿಯ ಅಗತ್ಯಗಳನ್ನು ಪೂರೈಸುವ ಸಲುವಾಗಿ ಸಮಗ್ರ ಸಾಹಿತ್ಯದ ಸಂಗ್ರಹವನ್ನು ಒಳಗೊಂಡಿದೆ.

ಸದರಿ ಗ್ರಂಥಾಲಯವು ಎಲ್ಲಾ ಸರ್ಕಾರಿ ಕರ್ತವ್ಯದ ದಿನಗಳಂದು ಬೆಳಿಗ್ಗೆ 10.00 ರಿಂದ ಸಂಜೆ 5.30 ರವರೆಗೆ ತೆರೆದಿರುತ್ತದೆ. ಆಸಕ್ತ ಎಲ್ಲಾ ಸರ್ಕಾರಿ ಅಧಿಕಾರಿಗಳು ಪರಾಮರ್ಶನದ (Reference only) ಉದ್ದೇಶಕ್ಕಾಗಿ ವಿತ್ತೀಯ ಕಾರ್ಯನೀತಿ ಸಂಸ್ಥೆಯ ಗ್ರಂಥಾಲಯವನ್ನು ಉಪಯೋಗಿಸಿಕೊಳ್ಳಬಹುದೆಂದು ಈ ಮೂಲಕ ತಿಳಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ನಿರ್ದೇಶಕರು,
ವಿತ್ತೀಯ ಕಾರ್ಯನೀತಿ ಸಂಸ್ಥೆ,
ಬೆಂಗಳೂರು.

ನಿರ್ದೇಶಕರ ಕಛೇರಿ, ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು-ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-560060.
ದೂ.080 2697 1000, 1014 (ಗ್ರಂಥಾಲಯ),